ದಿನಾಂಕಃ 30.10.2025 ರಂದು ಸಾಕ್ಷಿದಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ ಪಾಟೀ ಸವಾಲು: 1 ರಿಂದ 3 ನೇ ಪ್ರತಿವಾದಿ ಪರ ಶ್ರೀ ಕೆ.ಸಿ.ಸಿ. ವಕೀಲರಿಂದ:**

ಸಾಕ್ಷಿಗೆ ಒಂದು ದಾಖಲಾತಿಯನ್ನು ತೋರಿಸಲಾಗಿ ಸದರಿ ದಾಖಲಾತಿಯ ಪ್ರಕಾರ ನನ್ನ, 1 ರಿಂದ 3 ನೇ ಪ್ರತಿವಾದಿಯವರ ಮದ್ಯ ಆದಂತಹ ವಿಭಾಗಕ್ಕೆ ಸಂಬಂಧಿಸಿದ ದಾಖಲಾತಿಯೆಂದು ಗುರುತಿಸಿದ ಮೇರೆಗೆ ಸದರಿ ದಾಖಲಾತಿಯನ್ನು ನಿಡಿ-1 ಎಂದು ಗುರುತಿಸಲಾಯಿತು. ಸದರಿ ವಿಭಾಗದ ಪ್ರಕಾರ ನನ್ನ ಹೆಸರಿಗೆ ಬೊಮ್ಮೇನಹಳ್ಳಿ ಗ್ರಾಮದ ಸ.ನಂ.39/6 ಮತ್ತು 40/3 ರ ಜಮೀನು ಬಂದಿರುತ್ತದೆ ಎಂದರೆ ಸರಿ. ಅದರ ಪ್ರಕಾರ ಸದರಿ ಜಮೀನಿನ ಸ್ವಾಧೀನವನ್ನು ನಾನು ಹೊಂದಿರುತ್ತೇನೆ ಎಂದರೆ ಸರಿ. ನಿಡಿ-1 ರ ಪ್ರಕಾರ 1 ರಿಂದ 3 ನೇ ಪ್ರತಿವಾದಿಯವರಿಗೆ ಸೇರಿದ ಜಮೀನಿನಲ್ಲಿ ಅವರು ಸ್ವಾಧೀನಾನುಭವದಲ್ಲಿ ಇರುತ್ತಾರೆ ಎಂದರೆ ಸರಿ. ನಿಡಿ-1 ರ ಪ್ರಕಾರ 1 ನೇ ಪ್ರತಿವಾದಿಯವರಿಗೆ ತಮ್ಮ ಮಾವನಿಂದ ಬಂದಂತಹ ಸ್ವತ್ತುಗಳನ್ನು ನಾವುಗಳೆಲ್ಲಾ ಸೇರಿ ವಿಭಾಗವನ್ನು ಮಾಡಿಕೊಂಡಿರುತ್ತೇವೆ ಎಂದರೆ ಸರಿ. ಸದರಿ ಸಮಯದಲ್ಲಿ ದಾವಾ ಆಸ್ತಿಗಳು ರಂಗಮ್ಮ ಎಂಬುವವರ ಹೆಸರಿನಲ್ಲಿ ಇತ್ತು ಎಂದರೆ ಸರಿ. ಸದರಿ ಆಸ್ತಿಗಳನ್ನು ರಂಗಮ್ಮ ಅವರು ಯಾರಿಂದಲೂ ಕ್ರಯಕ್ಕೆ ಪಡೆದುಕೊಂಡಿರುವುದಿಲ್ಲ. ದೊಡ್ಡಯ್ಯ ರವರ ಮರಣದ ನಂತರ ಅವರು ಆಸ್ತಿಗಳು ನನ್ನ ತಂದೆ ಭೈರಯ್ಯ, ನನ್ನ ಅಜ್ಜಿ ರಂಗಮ್ಮ ಮತ್ತು ಲಕ್ಷ್ಮಣ ಎಂಬುವವರ ಹೆಸರಿಗೆ ಖಾತೆಯಾಗಬೇಕಾಗಿತ್ತು ಎಂದರೆ ಸರಿ.

ರಂಗಮ್ಮ ಎಂಬುವವರು ನಮ್ಮ ಮನೆಯಲ್ಲಿ ಕಳೆದ 20 ವರ್ಷಗಳಿಂದ ವಾಸಿಸುತ್ತಿದ್ದಾರೆ. ಕಳೆದ ಹಲವು ವರ್ಷದಿಂದ ರಂಗಮ್ಮ ರವರು ಪ್ರತಿವಾದಿಯವರ ಮನೆಯಲ್ಲಿ ವಾಸಿಸುತ್ತಿದ್ದರು ಇತ್ತೀಚೆಗೆ ನಾವು ಕರೆದುಕೊಂಡು ಬಂದಿರುತ್ತೇವೆ ಎಂದರೆ ಸರಿಯಲ್ಲ. ನಿಡಿ-1 ರ ಪ್ರಕಾರ 1 ರಿಂದ 3 ನೇ ಪ್ರತಿವಾದಿಯವರನ್ನು ಕೈ ಬಿಟ್ಟು ನಾವುಗಳು ವಿಭಾಗ ಮಾಡಿಕೊಂಡಿರುತ್ತೇವೆ ಎಂದರೆ ಸರಿ. ಸದರಿ ವಿಭಾಗದ ಪತ್ರದಲ್ಲಿ ದೊಡ್ಡಯ್ಯ ರವರಿಗೆ ಭೈರಯ್ಯ ಮತ್ತು ಲಕ್ಷ್ಮಣ ಎಂಬ ಇಬ್ಬರೇ ಮಕ್ಕುಳು ಎಂದು ತೋರಿಸಿರುತ್ತೇನೆ ಎಂದರೆ ಸರಿ. 1 ನೇ ಪ್ರತಿವಾದಿಯವರು ಭೈರಯ್ಯ ಎಂಬುವವರ ಮೊದಲನೇ ಪತ್ನಿ ಎಂದರೆ ಸರಿ. ನಿಪಿ-1 ರಲ್ಲಿ ಭೈರಯ್ಯ ಎಂಬುವವರ ಮೊದಲನೇ ಪತ್ನಿ 1 ನೇ ಪ್ರತಿವಾದಿ ಮತ್ತು 2 ಮತ್ತು 3 ನೇ ಪ್ರತಿವಾದಿಯ ಅವರ ಮಕ್ಕಳು ಎಂದು ಎಲ್ಲಿಯೂ ನಮೂದಿಸಿಲ್ಲ ಎಂದರೆ ಸರಿ. ವಾದ ಪತ್ರದಲ್ಲಿ ನಮೂದಿಸಿರುವ ಸ್ವತ್ತಿನ ಚೆಕ್ಕುಬಂದಿ ಮತ್ತು ನಿಪಿ-1 ರಲ್ಲಿ ನಮೂದಿಸಿರುವ ಚೆಕ್ಕುಬಂದಿಯ ನಡುವೆ ವ್ಯತ್ಯಾಸವಿರುತ್ತದೆ ಎಂದರೆ ಸರಿ. ದಾವಾ ಜಮೀನುಗಳನ್ನು ನಾನು ಮತ್ತು 1 ರಿಂದ 3 ನೇ ಪ್ರತಿವಾದಿಯವರು ಸಮವಾಗಿ ಸ್ವಾಧೀನಾನುಭವದಲ್ಲಿ ಇರುತ್ತೇವೆ. ದಾವಾ ಸ್ವತ್ತುಗಳಿಗೆ ಬೇಲಿ ಮಾಡಿಕೊಂಡು 1 ರಿಂದ 3 ನೇ ಪ್ರತಿವಾದಿಯವರು ಸ್ವಾಧೀನಾನುಭವದಲ್ಲಿ ಇರುತ್ತಾರೆ ಎಂದರೆ ಸಾಕ್ಷಿಯು 1 ರಿಂದ 3 ನೇ ಪ್ರತಿವಾದಿಯವರು ಯಾವುದೇ ಬೇಲಿಯನ್ನು ಮಾಡಿರುವುದಿಲ್ಲ ಎಂದು ನುಡಿಯುತ್ತಾರೆ.

ನಿಪಿ-1 ರ ಪ್ರಕಾರ ದಾವಾ ಸ್ವತ್ತುಗಳನ್ನು ನಮ್ಮ ಹೆಸರಿಗೆ ಮಾಡಿಕೊಳ್ಳುವ ಉದ್ದೇಶದಿಂದ

ಪ್ರಸ್ತುತ ಪ್ರಕರಣವನ್ನು ದಾಖಲು ಮಾಡಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿಗೆ 3 ದಾಖಲಾತಿಗಳನ್ನು ತೋರಿಸಲಾಗಿ ಸದರಿ ದಾಖಲಾತಿಗಳ ಪ್ರಕಾರ ದಾವಾ ಜಮೀನುಗಳು ರಂಗಮ್ಮ ಬಿನ್ ದೊಡ್ಡಯ್ಯ, ಲಕ್ಷ್ಮಣ ಬಿನ್ ದೊಡ್ಡಯ್ಯ ಎಂಬುವವರ ಹೆಸರಿನಲ್ಲಿ ಖಾತೆ ಇತ್ತು ಎಂದು ಗುರುತಿಸಿದ ಮೇರೆಗೆ ಸದರಿ ದಾಖಲಾತಿಯನ್ನು ನಿಡಿ-2 ರಿಂದ 4 ಎಂದು ಗುರುತಿಸಲಾಯಿತು. ನಿಪಿ-12 ರ ಪ್ರಕಾರ ದೊಡ್ಡಯ್ಯ ಮತ್ತು ಈರಯ್ಯ ರವರ ನಡುವೆ ಒಟ್ಟು ಕುಟುಂಬದ ಆಸ್ತಿ ವಿಭಾಗವಾಗಿರುವ ಸ್ವತ್ತುಗಳು ಈ ದಾವೆಯಲ್ಲಿರುವ ದಾವಾ ಸ್ವತ್ತುಗಳು ಎಂದರೆ ಸರಿ. ಪ್ರಸ್ತುತ ಪ್ರಕರಣದಲ್ಲಿ ಲಕ್ಷ್ಮಣ ಎಂಬುವವರ ಮರಣ ದೃಢೀಕರಣ ಪತ್ರವನ್ನು ಹಾಜರುಮಾಡಿರುವ ಬಗ್ಗೆ ನೆನಪಾಗುತ್ತಿಲ್ಲ. ದೊಡ್ಡಯ್ಯ ಎಂಬುವವರ ಕುಟುಂಬಕ್ಕೆ ನಾನು ಸೇರಿದವನಾಗಿರುತ್ತೇನೆ ಎಂದು ತೋರಿಸಲು ವಂಶವೃಕ್ಷವನ್ನು ಹಾಜರುಮಾಡಿರಬಹುದು. ದಾವಾ ಸ್ವತ್ತುಗಳ ಒಟ್ಟು ಚೆಕ್ಕು ಬಂದಿಯು ಪೂರ್ವಕ್ಕೆ ಪ್ರಕಾಶ್ ಗೌಡರ ಕೆರೆ, ಪಶ್ಚಿಮಕ್ಕೆ ಸೋಮೇಗೌಡ ರವರು ಬೇಲಿ ಮತ್ತು ತೋಟ, ಉತ್ತರಕ್ಕೆ ಪ್ರಕಾಶ್ ಗೌಡ ರವರ ತೋಟ ಮತ್ತು ದಕ್ಷಿಣಕ್ಕೆ ರಾಜೀವ್ ಗೌಡ ರವರ ತೋಟ ಮತ್ತು ಬೇಲಿ ಇರುತ್ತದೆ. ಸದರಿ ಚೆಕ್ಕುಬಂದಿಯನ್ನು ನನ್ನ ದಾವಾ ಪತ್ರದಲ್ಲಾಗಲೀ ಅಥವಾ ನನ್ನ ಮುಖ್ಯ ವಿಚಾರಣೆಯಲ್ಲಾಗಲೀ ಹೇಳಿ ಬರೆಸಿರುವುದಿಲ್ಲ ಎಂದರೆ ಸರಿ.

ದಾವಾ ಸ್ವತ್ತುಗಳು ನಮ್ಮ ಕುಟುಂಬದಲ್ಲಿ ಆದ ವಿಭಾಗದ ಮೂಲಕ ನನ್ನ ಹೆಸರಿಗೆ ಬಂದಿರುತ್ತದೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ವಿಭಾಗದ ಮೂಲಕ ದಾವಾ ಸ್ವತ್ತಿನ ಸ್ವಾಧೀನಾನುಭವದಲ್ಲಿ ನಾನು ಇರುತ್ತೇನೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿಯವರು ಸ.ನಂ.39/7 ರ ಪೂರ್ವ ದಿಕ್ಕಿನಿಂದ ನಮ್ಮ ಸ್ವಾಧೀನಾನುಭವಕ್ಕೆ ತೊಂದರೆಯನ್ನುಂಟು ಮಾಡಿರುತ್ತಾರೆ. ಆ ರೀತಿಯಾಗಿ ನಾನು ದಾವಾ ಪತ್ರದಲ್ಲಿ ತಿಳಿಸಿರುತ್ತೇನೆ. ಪ್ರತಿವಾದಿಗಳು ನನ್ನ ಸ್ವಾಧೀನಾನುಭವಕ್ಕೆ ತೊಂದರೆ ನೀಡಿದ್ದಾರೆ ಎಂದು ಹೇಳುವ ಬಾಬ್ತು ಪೋಲಿಸ್ ಠಾಣೆಯಲ್ಲಿ ಯಾವುದೇ ದೂರನ್ನು ನೀಡಿರುವುದಿಲ್ಲ. ವಾದ ಪತ್ರದಲ್ಲಿ ವಾದಿಯವರು ತೊಂದರೆ ನೀಡಿದ್ದರು ಎಂದು ಹೇಳಿ ಬರೆಸಿದ ದಿನಾಂಕ ನೆನಪಾಗುತ್ತಿಲ್ಲ. ರಂಗಮ್ಮ ಎಂಬುವವರು ನಮ್ಮ ಮನೆಯಲ್ಲಿ ಇದ್ದ ಕಾರಣ ಅವರ ಹೆಸರಿನಲ್ಲಿ ಇರುವ ಆಸ್ತಿಯನ್ನು ನಮ್ಮ ಹೆಸರಿಗೆ ಮಾಡಿಕೊಳ್ಳಲು ನಿಪಿ-1 ನ್ನು ಮಾಡಿಕೊಳ್ಳಲಾಗಿರುತ್ತದೆ ಎಂದರೆ ಸರಿಯಲ್ಲ. ನನಗಾಗಲೀ, ರಂಗಮ್ಮ ನವರಿಗಾಗಲೀ ಕುಟುಂಬದ ಮಧ್ಯೆ ವಿಭಾಗ ಮಾಡಿಕೊಳ್ಳಲು ಯಾವುದೇ ಹಕ್ಕಿರುವುದಿಲ್ಲ ಎಂದರೆ ಸರಿಯಲ್ಲ. ನಿಪಿ-1 ರ ಕುರಿತು 1 ರಿಂದ 3 ನೇ ಪ್ರತಿವಾದಿಯವರಿಗೆ 2024 ನೇ ಸಾಲಿನ ವರೆಗೂ ತಿಳಿದು ಬಂದಿರುವುದಿಲ್ಲ ಎಂದರೆ ಸರಿಯಲ್ಲ.

ನಂತರದಲ್ಲಿ 1 ರಿಂದ 3 ನೇ ಪ್ರತಿವಾದಿಯವರು ಸದರಿ ವಿಭಾಗದ ಮುಖಾಂತರ ಆದ ಖಾತೆಯ ರದ್ದನ್ನು ಕೋರಿ ಸಹಾಯಕ ಉಪ ವಿಭಾಗಾಧಿಕಾರಿಯವರ ಬಳಿ ಅರ್ಜಿಯನ್ನು ಸಲ್ಲಿಸಿರುತ್ತಾರೆ ಎಂದರೆ ಸರಿ. ದಾವಾ ಸ್ವತ್ತಿನಲ್ಲಿ ನಾನು ಎಂದಿಗೂ ಸ್ವಾಧೀನಾನುಭವದಲ್ಲಿ ಇರುವುದಿಲ್ಲ ಎಂದರೆ ಸರಿಯಲ್ಲ. ನ್ಯಾಯಾಲಯದ ತಡೆಯಾಜ್ಞೆಯನ್ನು ಪಡೆದುಕೊಂಡು ಸದರಿ ಸ್ವಾಧೀನವನ್ನು ಪಡೆದುಕೊಳ್ಳುವ ಉದ್ದೇಶವನ್ನು ಇಟ್ಟುಕೊಂಡಿರುತ್ತೇನೆ ಎಂದರೆ ಸರಿಯಲ್ಲ. ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ತಿಳಿಸಿರುವ ಅಂಶಗಳು ಸುಳ್ಳಿನಿಂದ ಕೂಡಿರುತ್ತವೆ ಎಂದರೆ

ಸರಿಯಲ್ಲ. ನಾನು ಹಾಜರುಪಡಿಸಿರುವ ದಾಖಲಾತಿಗಳನ್ನು ಪ್ರಕರಣಕ್ಕಾಗಿ ಸೃಷ್ಟಿಸಲಾಗಿರುತ್ತದೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿಗೆ ಸಂಬಂಧಿಸಿದಂತೆ ಪ್ರತ್ಯೇಕವಾದ ನಕ್ಷೆಯನ್ನು ಹಾಜರುಪಡಿಸಿರುತ್ತೇನೆ. ಪ್ರಸ್ತುತ ಪ್ರಕರಣಕ್ಕಾಗಿ ವ್ಯಾಜ್ಯ ಕಾರಣವನ್ನು ಸೃಷ್ಟಿಸಲಾಗಿರುತ್ತದೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ ಹೇ ಕೇ ಸ ಇ ಎ ಒ.,

ಸಹಿ/-

ಸಾಕ್ಷಿ ಸಹಿಃ

1 ನೇ ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಪ್ರದನ್ಯಾದಂ.,
ಮೂಡಿಗೆರೆ.